ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮಂತ್ರಿ, ಪಶುವೈದ್ಯ ಸೇವಾ ರಾಜ್ಯ ಸಚಿವರು).—

(ಅ) ಇಲ್ಲ.

(ಆ)

ಹಸುಗಳು	...	೫೧
ಎಮ್ಮೆಗಳು	...	೧೦
ಕೋಳಿಗಳು	...	೧೩೩೨
ಹಂದಿಗಳು	...	೧೬೦

(ಇ) ಹಾಲು ಉತ್ಪಾದನೆ ಸಮಾಧಾನಕರವಾಗಿದೆ. ಆದರೆ ಇದು ಜಿಲ್ಲೆಗೆ ಸಾಕಾಗುವುದಿಲ್ಲ.

(ಈ) ಕೇಂದ್ರದ ಅವಶ್ಯಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಸರಬರಾಜು ಮಾಡುವುದಂ

೧೪೧. ಶ್ರೀ ವಸಂ ವಿ. ಸಾಲ್ಯಾನ (ಕಾಪು). —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಪಠ್ಯಪುಸ್ತಕಗಳು ಸರಬರಾಜು ಇಲ್ಲದೆ ಪಾಠ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಪುಸ್ತಕಗಳಿಲ್ಲದೇ ವಿದ್ಯಾರ್ಥಿಗಳು ವ್ಯಾಸಂಗ ಮಾಡುವುದಕ್ಕೆ ತೊಂದರೆ ಯಾಗಿರುವುದು ನಿಜವೆ ?

(ಇ) ಹಾಗಿದ್ದಲ್ಲಿ ಯಾವಾಗ ಪುಸ್ತಕಗಳನ್ನು ಸರಬರಾಜು ಮಾಡಲಾಗುವುದು ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು).—

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಠ್ಯ ಪುಸ್ತಕಗಳ ಸರಬರಾಜು ಶೇಕಡ ೭೦ ಭಾಗವು ಮುಗಿದಿದ್ದು ಉಳಿದ ಪಠ್ಯ ಪುಸ್ತಕಗಳನ್ನು ಹಂತ ಹಂತದಲ್ಲಿ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಕಾರಣ, ಉಚಿತ ಪಠ್ಯ ಪುಸ್ತಕಗಳ ಯೋಜನೆ ರೀತ್ಯ ಬೇಡಿಕೆ ಶೇಕಡ ೩೮ ಜಾಸ್ತಿಯಾಯಿತು ಈ ಶೇಕಡ ೩೦ ಭಾಗವನ್ನು ಪುನಃ ಮುದ್ರಿಸಿ ಸರಬರಾಜು ಮಾಡಲು ಈಗಾಗಲೇ ವ್ಯವಸ್ಥೆ ನಡೆದಿದೆ.

(ಆ) ಶೇಕಡ ೭೦ ಭಾಗ ಪಠ್ಯ ಪುಸ್ತಕಗಳು ಈಗಾಗಲೇ ಸರಬರಾಜಾಗಿರುವುದರಿಂದ ಉಳಿದ ೩೦ ಭಾಗ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಲು ಸ್ವಲ್ಪ ಮಟ್ಟಿಗೆ ವಿಳಂಬವಾದರೂ ಸಹ ಮಕ್ಕಳ ಮಕ್ಕಳ ವ್ಯಾಸಂಗಕ್ಕೆ ತೊಂದರೆ ಯಾಗಲು ಸಾಧ್ಯತೆ ಇಲ್ಲ.

(ಇ) ಸರಬರಾಜು ಮಾಡಬೇಕಾದ ಉಳಿದ ಪಠ್ಯ ಪುಸ್ತಕಗಳನ್ನು ೧೫ ಆಗಸ್ಟ್ ರೊಳಗಾಗಿ ಪೂರ್ಣವಾಗಿ ಸರಬರಾಜು ಮಾಡಲು ಏರ್ಪಡಿಸಲಾಗಿದೆ.

ಕಾಂಪೋಜಿಟ್ ಜೂನಿಯರ್ ಹೈಸ್ಕೂಲ್

೧೭೨. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ). —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ೧೦ ವರ್ಷಗಳಿಗಿಂತ ಹೆಚ್ಚು ಕಾಲದಿಂದ ಸತತವಾಗಿ ೭ನೇ ತರಗತಿ ಹೊಂದಿರುವ ಶಾಲೆಗಳ ಸಂಖ್ಯೆ ಎಷ್ಟು ?

ಆ) ಸದರಿ ಶಾಲೆಗಳನ್ನು ಕಾಂಪೊಸಿಟ್ ಜೂನಿಯರ್ ಹೈಸ್ಕೂಲ್ ಅಂತ ಪರಿವರ್ತಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹೊಸ ಖಾಸಗೀ ಪ್ರೌಢಶಾಲೆ ಪ್ರಾರಂಭಿಸುವುದನ್ನು ನಿಲ್ಲಿಸಿ, ಸರ್ಕಾರದವರು ಹೊಸ ಜೂನಿಯರ್ ಕಾಂಪೊಸಿಟ್ ಪ್ರೌಢಶಾಲೆಗಳನ್ನು ತೆರೆಯಲು ಇರತಕ್ಕಂಥಹ ತೊಂದರೆಗಳೇನು ?